

# ಈ ಅವಕಾಶ ರಹಸ್ಯ, ವಿಸ್ಮಯ

## ಪ್ರಿಯಾಂಕಾ ಕುಮಾರ್

### ಸ್ಟಾರ್‌ಸುವರ್ಣದ 'ಕೃಷ್ಣತುಳಸಿ'ಯ ತುಳಸಿ

★ *ನಿಮಗೆ ನಟಿಸಲು ಅವಕಾಶ ಸಿಕ್ಕಿದ್ದು ಹೇಗೆ?*

ಅಭಿನಯದ ಬಗ್ಗೆ ನನಗೆ ಪ್ರಾಥಮಿಕ ತಿಳಿವಳಿಕೆ ಇರಲಿಲ್ಲ. ಟಿವಿಯವರೆ ನನಗೆ ಫೋನ್ ಮಾಡಿ ಆಡಿಷನ್‌ಗೆ ಆಹ್ವಾನಿಸಿದರು. ಹೇಗೆ ನನ್ನ ನಂಬರ್ ಅವರಿಗೆ ಸಿಕ್ಕಿತು ಎನ್ನುವ ರಹಸ್ಯ ಇವತ್ತಿಗೂ ನನಗೆ ಗೊತ್ತಿಲ್ಲ. ಒಂದು ಪ್ರಯತ್ನ ಮಾಡೋಣ ಎಂದು ಯೋಚಿಸಿ ಹೋದೆ. ಆಡಿಷನ್ನಿನಲ್ಲಿ ಆಯ್ಕೆಯೂ ಆದೆ. ಆದರೆ ಅಭಿನಯದ ಕೌಶಲ್ಯ ಗೊತ್ತಿರಲಿಲ್ಲ. ಅದಕ್ಕೆ ಧಾರಾವಾಹಿ ತಂಡವೇ ಸಹಾಯ ಹಸ್ತ ಚಾಚಿತು. ಉಷಾ ಭಂಡಾರಿ ಅವರ ಬಳಿ ಹತ್ತು ದಿನಗಳ ಕಾಲ ಅಭಿನಯದ ಪ್ರಾಥಮಿಕ ಪಾಠವನ್ನು ಹೇಳಿಸಿಕೊಟ್ಟರು. ನಾನು ನಿಧಾನಕ್ಕೆ ನಟನೆಗೆ ಸಿದ್ಧಳಾದೆ. ಮನಸ್ಸಿನ ಯಾವುದೋ ಮೂಲೆಯಲ್ಲಿ ಪರದೆಯಲ್ಲಿ ಕಾಣಿಸಿಕೊಳ್ಳುವ ಆಶೆ ಈಡೇರಿದೆ ಎಂದು ಈಗ ಅನಿಸುತ್ತಿದೆ.

★ *ನಟಿಸಬಲ್ಲೆ ಎನ್ನುವ ಧೈರ್ಯ ಬಂದಿದ್ದು ಹೇಗೆ?*

ನನ್ನ 15ನೇ ವಯಸ್ಸಿನಲ್ಲಿಯೇ ಮಾಡೆಲಿಂಗ್ ಆರಂಭಿಸಿದೆ. ಒಂದು ವರ್ಷ ಕಳೆಯುವಷ್ಟರಲ್ಲಿ ಯೂರೋಪಿನ ಒಂದು ಕಂಪನಿಯ ಸ್ಪರ್ಧೆಯಲ್ಲಿ ಆಯ್ಕೆಯಾಗಿ 15 ದಿನಗಳ ಯೂರೋಪ್ ಪ್ರವಾಸ ಮಾಡಿದ್ದೆ. ಅಲ್ಲಿನ ಸ್ಪರ್ಧೆ ತುಂಬಾ ಕಠಿಣವಾಗಿತ್ತು. ಮೊದಲ ಹಂತದ ಆಯ್ಕೆಯನ್ನು ಬೆಂಗಳೂರಿನಲ್ಲಿ ಏರ್ಪಡಿಸಿದ್ದರು. ನಂತರ ಮುಂಬೈನಲ್ಲಿ ಅಂತಿಮ ಸುತ್ತಿನ ಆಯ್ಕೆ ಸ್ಪರ್ಧೆ ಏರ್ಪಡಿಸಿದ್ದರು. ಒಬ್ಬ ಹುಡುಗ ಒಬ್ಬ ಹುಡುಗಿಯನ್ನು ಆಯ್ಕೆ ಮಾಡಿದರು. ನಾನು ಆಯ್ಕೆಯಾಗಿದ್ದು ನನ್ನ ಅದೃಷ್ಟ. ಯೂರೋಪ್‌ನಲ್ಲಿ 62 ದೇಶಗಳಿಂದ ಸ್ಪರ್ಧಾಳುಗಳು ಬಂದಿದ್ದರು. ಅದರಲ್ಲಿ ನನಗೆ 30ನೇ ಸ್ಥಾನ ಸಿಕ್ಕಿತ್ತು. ಆ ಅನುಭವ ನಟಿಸುವ ಆತ್ಮವಿಶ್ವಾಸವನ್ನು ತುಂಬಿದೆ.

★ *ಯೂರೋಪಿನ ಪ್ರವಾಸ ಹೇಗಿತ್ತು?*

ಅದೊಂದು ರೀತಿಯಲ್ಲಿ ಸಾಂಸ್ಕೃತಿಕ ವಿನಮಯದ ಅನುಭಾವವನ್ನು ತುಂಬಿದೆ. ಹತ್ತಾರು ದಿನಗಳ ಕಾಲ ಬೇರೆ ಬೇರೆ ದೇಶಗಳ ಮಾಡೆಲಿಂಗ್ ಸಹ ಸ್ಪರ್ಧಿಗಳ ಜೊತೆ ಒಡನಾಡಲು ಸಾಧ್ಯವಾಯಿತು. ಯೂರೋಪಿನ ಪ್ರವಾಸಿ ತಾಣಗಳ ಸುತ್ತಾಟ ಮತ್ತು ಫೋಟೋಗ್ರಫಿ ಮಾಡಲು ಸಹಾಯವಾಯಿತು. ಅಲ್ಲಿ ನನಗೆ ಸಾಕಷ್ಟು ಕಲಿಯಲು ಸಹಾಯವಾಗಿದೆ. ವಿವಿಧ ದೇಶಗಳ ಸಾಂಸ್ಕೃತಿಕ ಆಯಾಮ ನನಗೆ ಒಂದಿಷ್ಟು ಪರಿಚಯ ಆಗಿದ್ದು ಅಲ್ಲೇ. ಯೂರೋಪ್ ಯಾತ್ರೆ ನನ್ನ ಬಾಳಿನಲ್ಲಿ ಅವಿಸ್ಮರಣೀಯ ಘಟನೆಗಳಲ್ಲಿ ಒಂದು.

★ *ನಿಮ್ಮ ಕನಸು ಏನಾಗಿತ್ತು?*

ಅಪ್ಪ ಶಿಕ್ಷಣಾಧಿಕಾರಿಯಾಗಿದ್ದಾರೆ. ಅವರಿಗೆ ನಾನು ಐಎಎಸ್ ಮಾಡಬೇಕಿತ್ತು. ನನಗೆ ಏರ್‌ಲೈನ್‌ನಲ್ಲಿ (cabin crew) ಉದ್ಯೋಗಿ ಆಗಬೇಕು ಎನ್ನುವ ಆಶೆ ಇತ್ತು. ಬಿಬಿಎ ಓದುತ್ತಿದ್ದು, ನಟನೆಯಲ್ಲಿ ಈಗ ತೊಡಗಿದ್ದೇನೆ. ಇದರಲ್ಲಿ ಆಸಕ್ತಿಯೂ ಇರುವುದರಿಂದ ಇದನ್ನೇ ಮುಂದುವರಿಸುತ್ತೇನೆ. ಮುಂದೆ ಅವಕಾಶ ಮತ್ತು ಕಾಲ ನಿರ್ಧರಿಸುತ್ತದೆ.

★ *ತುಳಸಿ ಬಗ್ಗೆ ಹೇಳುವುದಾದರೆ...*

ನಮ್ಮದು ದೊಡ್ಡ ಶ್ರೀಮಂತರ ಕುಟುಂಬ. ನನಗೊಬ್ಬ ಅಣ್ಣನಿದ್ದಾನೆ. ನಮ್ಮಿಬ್ಬರದು ಅವಿನಾಭಾವ ಸಂಬಂಧ. ಒಬ್ಬರ ಮಾತನ್ನೊಬ್ಬರು ಮೀರುವುದಿಲ್ಲ. ಅಣ್ಣಾ ರಕ್ಷಕನಂತೆ ನನ್ನ ಬೆನ್ನಿಗಿದ್ದಾನೆ. ಯಾರೇ ಕೀಟಲೆ ಮಾಡಿದರೂ ಅವರ ಹುಟ್ಟಡಗಿಸುತ್ತಾನೆ. ಈಗ ನನ್ನಲ್ಲಿ ಪ್ರೀತಿ ಅರಳಿದೆ. ಅದನ್ನು ಅಣ್ಣಾ ಹೇಗೆ ತೆಗೆದುಕೊಳ್ಳುತ್ತಾನೆ ಎನ್ನುವ ಪ್ರಶ್ನೆ ಕಾಡುತ್ತಿದೆ.

■ ರಾಘವೇಂದ್ರ